2. ಅವರವರಿಗೆ ಮೇಲ್‌ಕಂಡ ತಾಲ್ಲೂಕುಗಳ ಅಮಲ್‌ದಾರ್ರಿಂದ ನೋಟಸ್ ತಲಪಿದ ಮೇಲೆ ಸದರೀ ಟೈಟಲ್ ಡೀಡ್‌ಗಳನ್ನು ತೆಗದುಕ್ಕೊಳ್ಳುವ ಬಗ್ಗೆ ಆ ಮೇರೆ ಹಾಜರಾಗತಕ್ಕದ್ದು. ಮತ್ತು ಅಂತಾ ನೋಟಸ್‌ಗಳನ್ನು ಕೂಡ್ಲೇ ಕೊಡುವಂತೆ ಅಮಲ್‌ದಾರ್ರಿಗೆ ಹುಕ್ಕುಂ ಆಗಿರುತ್ತೆ.

R. A. COLE,
Supt. of Inam Settlements.

ಫಿನಾನ್ಷಿಯಲ್ ಇಲಾಖೆ.

ತಾರೀಖು 12ನೇ ಜನವರೀ 1876.

ಶಿವಮೊಗ್ಗ ವ ಕಡೂರು ಡಿಸ್ಟ್ರಿಕ್ಟು ಟ್ರೆಜರೀಗಳ ಮೇಲೆ 500 ರೂಪಾಯಿಗೆಗೆ ಕಡಮೆಯಿಲ್ಲದ ಮೊಬಲಗಿಗೆ. ಸದರೀ ಡಿಸ್ಟ್ರಿಕ್ಟು ಖಜಾನೇಗಳಲ್ಲಾಗಲಿ, ತಾಲ್ಲೂಕು ಖಜಾನೇಗಳಲ್ಲಾಗಲಿ, ಮೊದಲು ವದಗಿದ ಮೊಬಲಗಿನಿಂದ ಹಣ ಸಲ್ಲತಕ್ಕ ನೇಕಡಾ 2 ಆಣೆ ವಟ್ಟಿಕ್ಕೆ ಸವ್ಲ್ಯೆ ಬಿಲ್‌ಗಳೆಂಬ ಹುಂಡಿಗಳನ್ನು ಕೊಡಲಿಕ್ಕೆ ಈ ಕೆಳಗೆ ರುಜೂ ಮಾಡಿರುವವರು ತಯಾರಾಗಿರುತ್ತಾರೆ.

H. HUDSON,
Dy. Acctt. Genl. in Mysore.

ಫಾರೆಸ್ಟ್ ಇಲಾಖೆ.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ಹೆಜ್ಜುಕಡಮೆ ಪುಮಾರ್ 24 ಟರ್ಗಗಳ ವಜನೀ ಯುಳ್ಳ ಸಂದಲ್ ಯಿದರಡಿ ವಿವರಿಸಲ್ಪಡುವ ತಾರೀಖುಗಳಲ್ಲಿಯೂ, ಸ್ಥಳಗಳೊಳಗೂ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

1876ನೇ ಫಿಬ್ರವರೀ 15ನೇ ಮೆರ್ಕುಂಬಲ್ಲಿ, ಶಿವಮೊಗ್ಗಾ ಕೋರ್ಟಿಯೊಳಗೆ $18\frac{1}{2}$ ಟರ್ಗಗಳು. ಬಗರಿ ಅದದ್.
1876ನೇ ಫಿಬ್ರವರೀ 24ನೇ ಮರ್ಕುಂಬಲ್ಲಿ, ಕವಲೇದುರ್ಗ ಕೋರ್ಟಿಯಲ್ಲಿ $5\frac{1}{2}$ ಟರ್ಗಗಳು. ಚಕ್ಕೆವ ಬುಕಣಿ.

ಹರಾಜ್ ತಾರೀಖು ಲಾಗಾಯತು ಮೂರುದಿನಗಳೊಳಗಾಗಿ ದರಖಾಸ್ತು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಮೇರೆ ಪಾವತೀ ಮಾಡತಕ್ಕದ್ದು. ಬಾಕೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 20 ದಿನಗಳೊಳಗಾಗಿ ಪಾವತೀ ಮಾಡತಕ್ಕದ್ದು.

ತಾರೀಖು 11ನೇ ಡಿಸೆಂಬರ್ 1875.

ಇದರಿಂದ ತಿಳಿಸಲ್ಪಡುವದೇನಂದರೆ,—ನಗರ್‌ಡಿವೀರ್ಜನಲ್ಲಿ ಉತ್ಪತ್ತಿಯಾದ ಬಾಬತು ಈ ಕೆಳಗೆ ಕಂಡ ಸಾಗುವಾನೀ ವ ಇತರ ಜಾತೀ ದಿಮ್ಮಿಗಳು ಯಿದರಡಿ ವಿವರಿಸಲ್ಪಟ್ಟ ತಾರೀಖು ವ ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ತಾರೀಖು ವ ಸ್ಥಳದ ಹೆಸರು.	ಸಾಗುವಾನೀ	ಬೀಟೀವುರ.	ಕಾಡುವುರ.	ತ್ಯಾಗದ ಕೂಬಗಳು.	ಕಾಡುವುರ	ಜುಮ್ಲಾ.
1ನೇ ಫಿಬ್ರವರೀ 1876; ಆಯನೂರು ಡಿಪೋ ಶಿವಮೊಗ್ಗಾ ತಾಲ್ಲೂಕು.	465	60	433	270	110	1,338

ಹರಾಜ್ ನಿಬಂಧನೆ—1873ನೇ ಜೂ॥ 12ನೇ ಮರ್ಕುಂ 20ನೇ ನಂಬರ್ ಬಾಬತು ಮೈಸೂರು ಗೆಜೆಟ್ ಇಸ್ತಿಹಾರ್‌ನಾಮೇ ಅನುಸರಿಸಿ ಶಿವಮೊಗ್ಗಾ ತಾಲ್ಲೂಕು ಟ್ರೆಜರೀಯಲ್ಲಿ ಮೊಬಲಗ್ ಪಾವತೀ ಮಾಡತಕ್ಕದ್ದಲ್ಲದೆ ದರಖಾಸ್ತು ಮೊಬಲಗ್ ಪೈಕೀ ಶೇಕಡಾ ಇಪ್ಪತ್ತೈದರ ಮೇರೆ ಸದರೀ ಟ್ರೆಜರೀಯಲ್ಲಿ ಪಾವತೀ ಮಾಡಿ ಪಡೆದುಕ್ಕೊಂಡ ರಸೀದಿಯನ್ನು ಹರಾಜ್ ತಾರೀಖು ಲಾಗಾಯತು 5ನೇ ದಿನ ಪೂರೈಸಲಿಕ್ಕೆ ಮುಂಚಿತವಾಗಿಯೇ ಹರಾಜ್ ನಡಿಸುವ ಆಫಿಸರರಲ್ಲಿ ಹಾಜರ್ ಮಾಡತಕ್ಕದ್ದು. ಪರತ್ತಿಗೆ ತಪ್ಪಿದವರ ಬಾಬತು ನಾಟುಗಳನ್ನು ಪುನಶ್ಚ ವಿಕ್ರಯಿಸುವ ಬಗ್ಗೆ ಹರಾಜ್ ತಾರೀಖು ಲಾಗಾಯತು 6ನೇ ದಿನ ಡಿಪೋದಲ್ಲಿಯೇ ಯರಡನೆ ಹರಾಜ್ ನಡಿಸಲ್ಪಡುವದು.